Indian Journal of History and Archaeology

ISSN (E):2582-225X
Vol-1 Issue 4, NOV-DEC, 2019, 58-60

# ಕರ್ನಾಟಕದ ಕಣಿಯರು

ಡಾ.ಆರ್.ಚಂದ್ರಶೇಖರ್

ಡಾ.ಆರ್.ಚಂದ್ರಶೇಖರ್
ಅತಿಥಿ ಉಪನ್ಯಾಸಕರು
ಮಾನವಶಾಸ್ತ್ರ ಅಧ್ಯಯನ ವಿಭಾಗ
ಮಾನಸ ಗಂಗೋತ್ರಿ, ಮೈಸೂರು

ಕಣಿಯ ಮತ್ತು ಇದರ ಪರ್ಯಾಯ ಪದಗಳಿಗೆ ಸಂಬಂಧಿಸಿದಂತೆ ಲೇಖನಗಳನ್ನು ಪರಿಶೀಲಿಸಿದಾಗ ಈ ಪದಗಳು ಮೂರು ಭಾಷೆಗಳಿಗೆ ಸೇರಿದವುಗಳೆಂದು ತಿಳಿದು ಬಂದಿದೆ. ಕಣಿಯನ್ (Kaniyan) ಮತ್ತು ಕಣ್ಯನ್ (Kanyan) ತಮಿಳು ಬಾಷೆ, ಕಣಿ (Kani) ಕಣಿಕಾರನ್ (Kanikaran), ಕಣಿಯನ್ ಮತ್ತು ಕಣಿಸನ್ (Kanison), ಮಳೆಯಾಳಂ ಭಾಷೆ, ಕಣಿಯ (Kaniyan) ಕಣೀಯರ್ ಅಥವಾ ಕಣಿಯರು (Kaniyaru) ಕನ್ನಡ ಭಾಷೆ ಮೇಲಿನವುಗಳಲ್ಲದೆ , ಕರ್ನಾಟಕದ ಕೆಲವು ಗ್ರಾಮಗಳಲ್ಲಿ ಇತರೇ ಜಾತಿಗೆ ಸೇರಿದ ಜನರು ಕಣಿಯರನ್ನು ದಾಸ ಅಥವಾ ತಿರುಕುಲದಾಸ ಎಂಬ ಉಪನಾಮಗಳಿಂದಲೂ ಕರೆಯುತ್ತಾರೆ.

ಕರ್ನಾಟಕ ರಾಜ್ಯವನ್ನು ಕಣಿಯರು ಮುಖ್ಯವಾಗಿ ಎರಡು ದಿಕ್ಕುಗಳಿಂದ ಪ್ರವೇಶಿಸಿದರೆಂದು ಹೇಳಬಹುದು. ತಮಿಳುನಾಡಿನ ಮೂಲಕ ಪ್ರವೇಶಿಸಿದ ಕಣಿಯರು ಪ್ರಥಮವಾಗಿ ಕೊಳ್ಳೇಗಾಲದಲ್ಲಿ ನೆಲೆಸಿದರು. ಕೊಳ್ಳೇಗಾಲದಿಂದ ಅವರು ಇತರೆ ತಾಲ್ಲೂಕುಗಳಿಗೆ ಪ್ರವೇಶಿಸಿದರು. ಬೆಂಗಳೂರು, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ವಾಸಿಸುವ ಕಣಿಯರು ಹಿಂದಿನ ಭಾಷೆಗಳಾದ ಮಲೆಯಾಳಂ ಮತ್ತು ತಮಿಳನ್ನು ಈಗ ಸಂಪೂರ್ಣವಾಗಿ ಮರೆತಿದ್ದಾರೆ. ಕೆಲವು ವೃದ್ದರಿಗೆ ಮಾತ್ರ ಈ ಭಾಷೆಗಳ ಪರಿಮಿತ ಜ್ಞಾನವಿದೆ.

ಕರ್ನಾಟಕದ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವ ಕಣಿಯರು ಕೇರಳದಿಂದ ನೇರವಾಗಿ ಕರಾವಳಿ ಪ್ರದೇಶದ ಮೂಲಕ

ಬಂದವರು. ಕಣಿಯರು ಕೇರಳ ರಾಜ್ಯದಲ್ಲಿ "ಹಿಂದುಳಿದ ಜಾತಿ" ಯಲ್ಲಿ ಸೇರಿದ್ದಾರೆ. ತಮಿಳುನಾಡಿನಲ್ಲಿ ಅವರನ್ನು "ಪರಿಶಿಷ್ಟ ಪಂಗಡ" ಕ್ಕೆ ಸೇರಿಸಲಾಗಿದೆ. ಕರ್ನಾಟಕದ ಕಣಿಯರು ಕೊಳ್ಳೇಗಾಲ ತಾಲ್ಲೂಕಿನಲ್ಲಿ ಮಾತ್ರ ಪರಿಶಿಷ್ಟ ಪಂಗಡಕ್ಕೆ ಸೇರಿಸಿದ್ದಾರೆ. ಉಳಿದ ಎಲ್ಲಾ ಪ್ರದೇಶಗಳಲ್ಲಿರುವ ಕಣಿಯರನ್ನು "2–ಎ ವರ್ಗ" ಕ್ಕೆ ಸೇರಿಸಲಾಗಿದೆ.

ಕರ್ನಾಟಕದ ಕಣಿಯರ ಸಂಸ್ಕೃತಿಯ ಬಗ್ಗೆ ಬರೆದವರಲ್ಲಿ ಪ್ರಾನ್ಸಿಸ್ ಬುಖಾನಾನ್‌ರು ಮೊದಲಿಗರು. ಮೈಸೂರು ಜಿಲ್ಲೆಯ ಟಿ. ನರಸೀಪುರದಲ್ಲಿ ಕಣಿಯರನ್ನು 19ನೇ ಶತಮಾನದ ಆದಿಯಲ್ಲಿ ಭೇಟಿಯಾದ ಉಲ್ಲೇಖವಿದೆ. ಮಾಟ, ಮಂತ್ರ, ದೇವತಾ ಶಾಸ್ತ್ರ, ಜ್ಯೋತಿಷ್ಯ, ನಾಟಿ ವೈದ್ಯ ಪದ್ಧತಿ ತಿಳಿದವರೆಂದು ಬರೆದಿದ್ದಾರೆ (ಬುಖಾನಾನ್ 1807). ಇದಲ್ಲದೆ ಮಲಬಾರಿನ ಕೆಲವು ಕಣಿಯರು ಕೊಡೆಗಳ ತಯಾರಿಯಲ್ಲಿ ಪರಿಣಿತರಾಗಿರುವುದನ್ನು ಬುಖಾನಾನರು ಗುರ್ತಿಸಿದ್ದಾರೆ.

ಬ್ರಿಟೀಷ್ ಆಡಳಿತಗಾರ – ಮಾನವ ಶಾಸ್ತ್ರಜ್ಞರಾದ ಇ. ಥರ್ಸ್ಟನ್‌ರು ಮಲಬಾರಿನ ಕಣಿಯರ ಬಗ್ಗೆ ವಿವರಿಸಿರುತ್ತಾರೆ. ಹಾಗೆಯೆ ಎಲ್.ಕೆ. ಅನಂತಕೃಷ್ಣ ಅಯ್ಯರ್ ಕಣಿಯರ ಬಗ್ಗೆ ಉಲ್ಲೇಖಿಸಿರುತ್ತಾರೆ.

1974 ರಲ್ಲಿ ಪ್ರಕಟವಾದ Ethnographic notes on "Scheduled Caste and Scheduled Tribe" ಎಂಬ ಭಾರತೀಯ ಜನಗಣತಿ ಇಲಾಖೆ ಪ್ರಕಟಿಸಿದ ವರದಿಯಲ್ಲಿ ಕಣಿಯರಿಗೆ ಸಂಬಂಧಿಸಿದ ಅನೇಕ ವಿವರಗಳನ್ನು ಕಾಣಬಹುದಾಗಿದೆ. ಇತ್ತೀಚೆಗೆ ಭಾರತೀಯ ಮಾನವ ಶಾಸ್ತ್ರ ಸರ್ವೇಕ್ಷಣಾ ಸಂಸ್ಥೆ (ASI) ಯವರು ಪ್ರಕಟಿಸಿದ "The Schedule Tribe" ಎಂಬ ಗ್ರಂಥದಲ್ಲಿ ಕರ್ನಾಟಕದ ಕಣಿಯರ ಬಗ್ಗೆ ಸಂಕ್ಷಿಪ್ತ ವರ್ಣನೆ ಇದೆ. (ಸಿಂಗ್.ಕೆ.ಎಸ್.) ಒಟ್ಟಾರೆಯಾಗಿ ಕರ್ನಾಟಕದಲ್ಲಿ ಬೆಂಗಳೂರು, ಮೈಸೂರು, ಚಾಮರಾಜನಗರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಣಿಯರ ಕುಟುಂಬಗಳು ಚದುರಿರುವುದನ್ನು ಕಾಣಬಹುದಾಗಿದೆ.

ಮೇಲಿನ ಎಲ್ಲಾ ಸಂಶೋಧನಾತ್ಮಕ ಮತ್ತು ಆಡಳಿತಾತ್ಮಕ ವರದಿಗಳನ್ನು ಗಮನಿಸಿದಾಗ ಕಣಿಯರ ಮೂಲ ಸ್ಥಾನವು ಕೇರಳದ ಮಲಬಾರ್ ಮತ್ತು ತಿರುವನಂತಪುರ ಪ್ರದೇಶಗಳೆಂದು ವ್ಯಕ್ತವಾಗುತ್ತದೆ. ಇವರು ಉದ್ಯೋಗಾವಕಾಶವನ್ನು ಹುಡುಕಿಕೊಂಡು ತಮಿಳುನಾಡು ಮತ್ತು ಕರ್ನಾಟಕದ ಹಲವೆಡೆ ತಮ್ಮ ವಾಸಸ್ಥಾನವನ್ನು ಮಾಡಿಕೊಂಡಿದ್ದಾರೆ. ಸಾಂಪ್ರದಾಯಿಕ ಕಸುಬಾದ ಜ್ಯೋತಿಷ್ಯ ಮತ್ತು ನಾಟಿ ಮದ್ದಿನಲ್ಲಿ ತಜ್ಞರಾದ ಇವರು ಆಗಿಂಗಾಗ್ಗೆ ವಲಸೆ ಹೋಗುವುದು ಅನಿವಾರ್ಯವಾಗಿತ್ತು. ಕಣಿಯರು ಹೆಚ್ಚಾಗಿ

ವಾಸವಾಗಿರುವ ಬೆಂಗಳೂರು, ಮೈಸೂರು, ಚಾಮರಾಜನಗರ ಜಿಲ್ಲೆಗಳಲ್ಲಿ ಕ್ಷೇತ್ರಾಧ್ಯಯನ ನಡೆಸಿ ಸೂಕ್ತ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

**ಪರಾಮರ್ಶನ ಗ್ರಂಥಗಳು**

1. Singh. K.S. – 2002 -The Scheduled Tribe Vol-III New Delhi, Oxford University Press,P-464 – 466
2. Parthasarathy – 2002 - People of India. Tamilnadi.Ed.by K.S. SinghNew Delhi, Oxford University Press.
3. Census of India – Ethnographic Notes on,1961 – 1974 Scheduled Caste andScheduled Tribes (Ed. G.P. Padmanabha) P. 371 – 374

4. Thurston. E. - Caste and Tribes of Southern, 1909 .(1975) Indian Madras : Madras Govt.Press, Delhi (P. 178 – 200)

5. Jois . M.N.-1974 - Karmayogi Mysore: Mysore Printing and Publishing House.